**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 1679/2022**

| | | | |
|---|---|---|---|
| **ಹೆಸರು** | **:** | **ರೇವಣಸಿದ್ದ** | **ಚಾ.ಸಾ. 2** |
| **ತಂದೆಯ ಹೆಸರು** | **:** | **ಮಲ್ಲಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **50 ವರ್ಷ** | **ದಿನಾಂಕಃ 26-09-2025** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಅಣವಾರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು 3 ರವರು ನನಗೆ ಗೊತ್ತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-2ರ ಭಾವಚಿತ್ರದಲ್ಲಿ ನಾನು, ಚಾಸಾ-1, 3 ಮತ್ತು ಚಿಂಚೋಳಿ ಪೋಲಿಸರು ಇದ್ದೇವೆ. ನಾನು ಅಣವಾರ ಗ್ರಾಮದಲ್ಲಿ ಹೋಗುತ್ತಿದ್ದಾಗ ರಸ್ತೆಯ ಕಾರಣ ಜಗಳವಾಗಿದೆ ಎಂದು ಹೇಳಿ ಪೊಲೀಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ. ಆಗ ಪೋಲಿಸರು ಸಾಕ್ಷಿಗಾಗಿ ನಿಲ್ಲು ಎಂದು ಹೇಳಿ ನಿಪಿ-2ರ ಭಾವಚಿತ್ರವನ್ನು ಪಡೆದಿದ್ದಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ JPA ವಕೀಲರಿಂದಃ</u>**

ಯಾವ ಕಾರಣಕ್ಕಾಗಿ ನಿಪಿ-3ರ ದಾಖಲೆಯನ್ನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-3ರ ದಾಖಲೆಯನ್ನು ಪೋಲಿಸರು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ನಿಪಿ-2ರ ಭಾವಚಿತ್ರವನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**